ಶ್ರೀ ಅಂದಾನಯ್ಯ.—1962-63ರಲ್ಲಿ ಸರ್‌ಚಾರ್ಜ್ ವಸೂಲು ಮಾಡಲಿಲ್ಲವೇ ?

Sri B. D. JATTI.—Not to the fullest extent.

ಶ್ರೀ ಸಿ. ಆರ್ ರಂಗೇಗೌಡ.—ಪರಿಶಿಷ್ಟದಲ್ಲಿ ನಮೂದಿಸಿರುವ ಪ್ರಕಾರ 21.34ಕೋಟಿ ರೂಪಾಯಿ ಬರುತ್ತದೆ. ಮೂರನೆಯ ಯೋಜನೆಗೆ 42ಕೋಟಿ ರೂಪಾಯಿ ಬೇಕು ಎಂದು ಹೇಳಿದ್ದೀರಿ. ಉಳಿದ 20.66ಕೋಟಿ ರೂಪಾಯಿಗಳನ್ನು ಪಡೆಯಲು ಏನೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಎಕ್ಸೈಸಿಟಿ ಡ್ಯೂಟಿ 5 ವರ್ಷಗಳಿಗೆ 2½ಕೋಟಿ, ಮತ್ತು ಇದೇರೀತಿಯ ತೆರಿಗೆಗಳಿಂದ ನಮಗೆ ಹಣ ಬರುವುದಾಗಿದೆ. ಇದಲ್ಲದೆ ಇನ್ನೂ ಕಡಿಮೆ ಬೀಳುವುದನ್ನು ಯಾವ ರೀತಿ ಭರ್ತಿಮಾಡಬೇಕು ಎಂದು ನೋಡಬೇಕು.

ಶ್ರೀ ಸಿ. ಆರ್. ರಂಗೇಗೌಡ.—ಹಿಂದೆ ಇದೇ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಎರಡು ವರ್ಷ ಮಾತ್ರ ಸರ್‌ಚಾರ್ಜ್ ಹಾಕುತ್ತೇವೆಂದು, ಆದರೆ ಪರಿಶಿಷ್ಟದಲ್ಲಿ ಮೂರುವರ್ಷಕ್ಕೆ ಎರಡುಕೋಟಿ ರೂಪಾಯಿ ಪ್ರಕಾರ ಆರುಕೋಟಿ ರೂಪಾಯಿ ಆಗುತ್ತದೆಂದು ಹೇಳಿದ್ದಾರೆ. ಹಾಗಾದರೆ 1965-66ರಲ್ಲಿಯೂ ಸರ್‌ಚಾರ್ಜ್ ವಿಧಿಸುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಕಾನೂನು ಪ್ರಕಾರ ಎರಡುವರ್ಷ ಅವಧಿ ಇದೆ. ಒಂದು ವೇಳೆ ಅದು extend ಆದರೆ ಎರಡು ಕೋಟಿ ರೂಪಾಯಿ ಬರುತ್ತದೆ. ಸರ್ವೆ ಸೆಟಲ್‌ಮೆಂಟ್ ಪೂರ್ತಿಯಾದರೆ 3-4 ಕೋಟಿ ರೂಪಾಯಿ ಬರಬಹುದು.

ಶ್ರೀ ಅಂದಾನಯ್ಯ.—ಕಡಿಮೆ ಬರುವ ಹಣಕ್ಕೆ ಎಲೆಕ್ಟ್ರಿಸಿಟಿಯಿಂದ ವಸೂಲು ಮಾಡುತ್ತೇವೆಂದು ಹೇಳಿದಿರಿ. ಆದರೆ ಈಗಾಗಲೇ ಎಲೆಕ್ಟ್ರಿಸಿಟಿ ರೇಟು ಜಾಸ್ತಿಯಾಗಿರುವುದನ್ನು ಕೈಬಿಡುತ್ತೇವೆಂದು ಹೇಳಿದುದು ನಿಜವೇ ಹೇಗೆ ?

ಶ್ರೀ ಬಿ. ಡಿ. ಜತ್ತಿ.—ನಮಗೆ ಎಷ್ಟು ಆದಾಯ ಬರುತ್ತದೆಯೋ ಅದರ ಮೇಲೆ ಪ್ರಯತ್ನ ಮಾಡಿ ನೋಡಬೇಕು.

ಶ್ರೀ ಅಂದಾನಯ್ಯ.—1962-63ನೇ ಸಾಲಿನಲ್ಲಿ ಸರ್‌ಚಾರ್ಜು ಎಷ್ಟು ವಸೂರಾಗಬಹುದು ?

ಶ್ರೀ ಬಿ. ಡಿ. ಜತ್ತಿ.—1962-63ರಲ್ಲಿ ಇಲ್ಲ ಹೇಳಿರುವಂತೆ ಆಗುವುದಿಲ್ಲ. ಈಗ ಮೂರನೇ ಒಂದು ಭಾಗ ಎಂದು ಮಾಡಿರುವುದರಿಂದ ಕಡಿಮೆಯಾಗಬಹುದು.

Breach of the Tank constructed by Meadows Taylor.

*Q.—577. Sri MAHANTA SWAMY (Shahpur).—

Will the Government be pleased to state :—

(*a*) whether they have investigated and found out the reason for the breach of the tank constructed by Meadows Taylor, with a storage capacity of 1,200 acres ;

(*b*) whether they have called for report and found out the total loss sustained by Government ever since the breach of the above tank ;

(*c*) the estimated cost for repairing the same ;

(*d*) when they will repair the same in order to supply water to the lands of the poor ?

A.—Sri S. NIJALINGAPPA (Chief Minister).—

(*a*) Yes.
(*b*) Yes.
(*c*) About Rs. 50,000.
(*d*) This is being examined.

ಶ್ರೀ ಮಹಂತಸ್ವಾಮಿ.—ಕೆರೆ ಒಡೆದು ಹೋಗಲು ಕಾರಣಗಳನ್ನು ಪರಿಶೀಲನೆ ಮಾಡುವಾಗ ಯಾವ ಯಾವ ಕಾರಣಗಳನ್ನು ಕಂಡುಹಿಡಿದಿರಿ ?

† ಶ್ರೀ ಎಸ್. ನಿಜಲಿಂಗಪ್ಪ.—ಇದರಲ್ಲಿ ಒಂದು ಅನುಮಾನ ಬಂದಿತ್ತು. ಯಾರೋ ಕೆಲವರು ಟ್ಯಾಂಕ್ ಬೆಡ್‌ನಲ್ಲಿರುವವರು ಇದಕ್ಕೆ ಅಡ್ಡಿ ಬಂದಿರಬಹುದೋ ಏನೋ ಎಂದು ವಿಚಾರಣೆ ಮಾಡಿದ್ದರಲ್ಲಿ ಇದಕ್ಕೆ ಸರಿಯಾದ ರುಜುವಾತು ಬರಲಿಲ್ಲ.

ಶ್ರೀ ಮಹಂತಸ್ವಾಮಿ.—ಒಡೆದು ಹಾಕಲು ಕಾರಣಗಳನ್ನು ಪತ್ತೆ ಹಚ್ಚಲು ಗೂಢಚಾರರನ್ನೇನಾದರೂ ನೇಮಿಸಿದ್ದು, ಅವರು ಈ ಬಗ್ಗೆ ವರದಿಯನ್ನೇನಾದರೂ ಕೊಟ್ಟಿದ್ದಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ವರದಿ ಕೊಟ್ಟಿದ್ದಾರೋ ಇಲ್ಲವೋ ಅದರ ಮಾಹಿತಿ ಇಲ್ಲಲ್ಲ. ನಾಲ್ಕೈದು ವರ್ಷಗಳಲ್ಲಿ ಈ ಕೆರೆ ಒಡೆದು ಹೋಯಿತು. ಆದರೆ ಇದಕ್ಕೆ ಕಾರಣ ಇನ್ನೂ ಗೊತ್ತಾಗಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಕೆರೆ ಕಟ್ಟಿದ ಮೇಲೆ ಎಷ್ಟು ವರ್ಷಗಳ ಅಂತರದಲ್ಲಿ ಈ ಕೆರೆ ಒಡೆದು ಹೋಯಿತು? ಮತ್ತು ಈ ಕೆರೆ ಕಟ್ಟಿ ಎಷ್ಟು ದಿವಸಗಳಾದುವು?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರ ಗೊತ್ತಿಲ್ಲ. ಕೆರೆ ಕಟ್ಟಿ ಸುಮಾರು ನೂರು ವರ್ಷಗಳ ಮೇಲಾಗಿರಬಹುದು. ಇದು ಬಹಳ ಹಿಂದಿನ ಮಾತು. ಆದರೆ ಈ ಕೆರೆ ಒಡೆದು ಸುಮಾರು ನಾಲ್ಕೈದು ವರ್ಷಗಳಾದುವು.

ಶ್ರೀ ಎಸ್. ಎಂ. ಗುರಿಡ್ಡಿ.—ಈ ಕೆರೆ ದುರಸ್ತು ಮಾಡಿದ್ದರೆ ಅದಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿತ್ತು. ಇಲ್ಲಿಯವರೆಗೆ ದುರಸ್ತು ಮಾಡಿಸದೇ ಇರಲು ಕಾರಣಗಳೇನಿದ್ದುವು?

ಶ್ರೀ ಎಸ್. ನಿಜಲಿಂಗಪ್ಪ.—ಇದು ಹಳೇ ಕೆರೆ. ಇದರಿಂದ ಸುಮಾರು 315 ಎಕರೆಯಷ್ಟು ಸಾಗು ಆಗುತ್ತಿತ್ತು. ಆದರೆ ಈಗ ಮುಳುಗಡೆಯಾದರೆ, 1,381 ಎಕರೆಯಷ್ಟು ಭೂಮಿ ಹೋಗುತ್ತದೆ. ಇದರಲ್ಲಿ ಸುಮಾರು 673 ಎಕರೆ ಭೂಮಿ ಸರಕಾರದ್ದು ಮತ್ತು ಬಾಕಿ ಭೂಮಿ ಖಾಸಗಿ ಜನಗಳಿಗೆ ಸೇರಿದ್ದು. ಇದನ್ನು ಅಕ್ವೈರು ಮಾಡಿಕೊಳ್ಳಬೇಕಾದರೆ ಸುಮಾರು 5,66,000 ರೂಪಾಯಿಗಳಷ್ಟು ಬೇಕಾಗುತ್ತದೆ. ಆದಕಾರಣ ಈ ರೀತಿ ಖರ್ಚುಮಾಡುವುದು ಸರಿಯೇ, ನ್ಯಾಯವೇ, ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ವಿ. ಎಂ. ದೇವ್.—ಕೆರೆ ಒಡೆದು ಹೋಗಿರುವಾಗ ಅಕ್ವೈರು ಮಾಡಬೇಕು ಎಂದರೆ ಹೇಗೆ?

ಶ್ರೀ ಎಸ್. ನಿಜಲಿಂಗಪ್ಪ.—ಕೆರೆ ರಿಪೇರಿ ಮಾಡುವುದೆಂದರೆ ಅದು ಹೂತುಹೋಗಿದೆ. ಅಲ್ಲದೆ ಈ ಕೆರೆಯಿಂದ ಮುಳುಗಡೆಯಾಗತಕ್ಕ ಪ್ರದೇಶ ಜಾಸ್ತಿಯಾಗಿದೆ.

ಶ್ರೀ ಇ. ನಾರಾಯಣ ಗೌಡ.—ಕೆರೆ ಒಡೆದು ಹೋಗಿದ್ದರೂ ವಾಟರು ರೇಟನ್ನು ವಸೂಲು ಮಾಡುತ್ತಿದ್ದಾರೆನ್ನುವುದು ನಿಜವೇ?

ಶ್ರೀ ಎಸ್. ನಿಜಲಿಂಗಪ್ಪ.—ಇದರ ವಿವರ ನನ್ನಲ್ಲಿಲ್ಲ.

ಶ್ರೀ ಶರಣಪ್ಪ.—ಅಪ್ಪರ್ ಕೃಷ್ಣಾ ಯೋಜನೆಯ ಅಚ್ಚುಕಟ್ಟಿನ ವಿಸ್ತೀರ್ಣದಲ್ಲಿ ಇದು ಬರುತ್ತದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ತಿಳಿಯದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಂಜಿನಿಯರಿಂಗು ಇರಾಖೆಯವರ ದೋಷದೋಷಗಳಿಂದಾಗಿ ಕೆರೆ ಒಡೆದು ಹೋಗುತ್ತಿದ್ದರೂ ಅವರ ಮೇಲೆ ಸರಕಾರ ಉಗ್ರವಾದ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದರಿಂದ ಈ ರೀತಿಯಾಗುತ್ತಿದೆ. ಇದರ ಬಗ್ಗೆ ಬೇಕಾದರೆ ನಮ್ಮ ಭಾಗದ ಒಂದು ಕೆರೆಯ ಉದಾಹರಣೆಯನ್ನೂ ತಮಗೆ ಕೊಡುತ್ತೇನೆ.

Mr. SPEAKER.—The illustration does not come within this question.

ಶ್ರೀ ಮಹಂತಸ್ವಾಮಿ.—ರಾಜ್ಯಕ್ಕೆ ದೊಡ್ಡ ನಷ್ಟವನ್ನು ಮಾಡಿ ಅಪರಾಧ ಮಾಡಿರತಕ್ಕವರನ್ನು ವಿಚಾರಣೆ ಮಾಡಲು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲೇನೂ ಅಂತಹ ದೊಡ್ಡ ಅಪರಾಧ ಕಾಣಿಸುವುದಿಲ್ಲ.

Estimates for a Project near Gosaisgudde for Annehole in Chatra Hobli of Nanjangud Taluk.

*Q.—386. Sri D. M. SIDDIAH (Biligere).—

Will the Government be pleased to state.—

(*a*) whether any estimates have been prepared for a project near Gosaisgudde for Annehole in Chatra Hobli of Nanjangud Taluk;